ಕಥೆ

# ನಾಗರತಿ




## ರಾಜೀವ ನಾರಾಯಣ ನಾಯಕ

ಕಲೆ: ವಿಶ್ವನಾಥ್ ಎ.ಎಸ್.


‘ನಮ್ಮ ಕಾಲೇಜಿನ ಕಣ್ಮಣಿ, ನಮಗೆ ತಾರುಣ್ಯ ಕರುಣಿಸಿದ ರಮಣಿ- ಯಾರು ಬಲ್ಲಿರೇನಯ್ಯಾ?’ ಎಂದು ಹೊಸಬಣ್ಣ ಯಕ್ಷಗಾನ ಶೈಲಿಯಲ್ಲೊಂದು ಪ್ರಶ್ನೆಯನ್ನು ‘ಕೆನರಾ ಕಾಲೇಜ್ 1989 ಬಿಎಸ್ಸಿ ಬ್ಯಾಚ್’ ಎಂಬ ಕ್ಲಾಸ್‌ಮೇಟುಗಳ ವಾಟ್ಸಾಪ್ ಗ್ರುಪ್ಪಿನಲ್ಲಿ ಪೋಸ್ಟ್ ಮಾಡಿದ್ದಷ್ಟೇ! ‘ನಾಗರತಿ ನಾಗರತಿ’ ಎಂದು ಆಕಾಶದಲ್ಲಿ ಪಟಾಕಿ ಸಿಡಿಸಿದಂತೆ ತಡರಾತ್ರಿವರೆಗೂ ಎಲ್ಲರ ಮೊಬೈಲು ಬೆಳಗುತ್ತಲೇ ಇತ್ತು. ಕಾಲೇಜಿನಲ್ಲಿ ಬ್ಯೂಟಿಕ್ವೀನ್ ಆಗಿದ್ದ ನಾಗರತಿಯ ಸ್ಮೃತಿಗಳು, ಡಿಗ್ರಿ ಮುಗಿಸಿ ಮೂರು ದಶಕಗಳಾದರೂ ಬಗೀಲೂ ಮಸುಕಾಗಿರಲಿಲ್ಲ. ಇತ್ತೀಚೆಗೆ ಬರ್ತ್‌ಡೇ, ವೆಡ್ಡಿಂಗ್ ಆ್ಯನಿವರ್ಸರಿಗಳ ಕಾಟಾಚಾರಗಳಲ್ಲಿ ಮತ್ತು ಫಾರ್ವರ್ಡ್ ಮಾಡಿ ಮಾಡಿ ಸವಕಲಾದ ಜೋಕುಗಳಲ್ಲಿ ಬಸವಳದಿದ್ದ ಈ ವಾಟ್ಸಾಪ್ ಗ್ರುಪ್ಪಿನಲ್ಲಿ ನಾಗರತಿಯ ನೆನಪು ಮಾತ್ರಕ್ಕೆ ವಿದ್ಯುತ್ ಸಂಚಾರವಾಗಿತ್ತು.

ಕೆನರಾ ಆರ್ಟ್ಸ್ ಆಂಡ್ ಸೈನ್ಸ್ ಕಾಲೇಜಿನಲ್ಲಿ ಎಂಬತ್ತೊಂಬತ್ತನೇ ಇಸ್ವಿಯಲ್ಲಿ ಡಿಗ್ರಿ ಮುಗಿಸಿದ ಪ್ರತಿಯೊಬ್ಬರಿಗೂ ಅವರದೇ ಆದ ‘ರತಿ’ ನೆನಪುಗಳಿದ್ದವು. ವಯೋಸಹಜ ಗಾಂಭೀರ್ಯವನ್ನು ಕಳಚಿಕೊಂಡು ಹುಡುಗಾಟಕ್ಕಿಳಿಯಲು ಈ ಗ್ರೂಪಿಗೆ ನಾಗರತಿ ಒಂದು ನೆಪವಾಗಿಯೂ ಒದಗಿ ಬಂದಿದ್ದಳು. ಯೌವನದ ನೆನಪೊಂದು ಮಧ್ಯವಯಸ್ಸು ದಾಟುತ್ತಿರುವ ತಮ್ಮಲ್ಲಿ ಬೆಚ್ಚಗಿನ ಭಾವವನ್ನು ಉದ್ದೀಪಿಸುವ ರೀತಿಗೆ ಹೊಸಬಣ್ಣ ಅಚ್ಚರಿ ಪಟ್ಟಿದ್ದ.

ಈ ವಾಟ್ಸಾಪ್ ಗ್ರುಪ್ ಮಾಡುವಾಗ ಹೊಸಬಣ್ಣನಿಗೆ ಅಂಥ ಘನ ನಿರೀಕ್ಷೆಗಳೇನೂ ಇರಲಿಲ್ಲ. ಅದು ಕ್ರಿಯೇಟ್ ಆದದ್ದೂ ಆಕಸ್ಮಿಕವಾಗಿಯೇ. ಪ್ರಸ್ತುತ ಮುಂಬೈವಾಸಿ ಹೊಸಬಣ್ಣ ಮತ್ತು ಬೆಂಗಳೂರಲ್ಲಿರುವ ಸಗಡಗೇರಿ ಆನಂದು ಇಬ್ಬರೂ ಅಂಕೋಲೆ ಬಂಡಿಹಬ್ಬದ ಸಮಯದಲ್ಲಿ ಅಕಸ್ಮಾತ್ತಾಗಿ ಭೇಟಿಯಾಗಿದ್ದರು. ಬಿಎಸ್ಸಿ ಮುಗಿಸಿದ ನಂತರ ಉದ್ಯೋಗ ನಿಮಿತ್ತ ಊರು ಬಿಟ್ಟವರಾದ್ದರಿಂದ, ಅವರದು ಅಪರೂಪದ ಭೇಟಿಯಾಗಿತ್ತು. ಅಂಕೋಲಿ ಬಸ್‌ಸ್ಟ್ಯಾಂಡಿನ ನಡುವೆ ನಿಂತಿರುವ ಒಂಟಿ ಸಾಗುವಾನಿ ಮರದ ಕೆಳಗೆ ಹರಟೆ ಹೊಡೆದು ಹಳೆಯ ನೆನಪುಗಳಲ್ಲಿ ಮಿಂದೆದ್ದಿದ್ದರು.

ಕಾಲೇಜು ದಿನಗಳಲ್ಲಿ, ಕ್ಲಾಸು ಮುಗಿಸಿ ಊರಿಗೆ ಹೋಗಲು ಅವರೆಲ್ಲ ಬಸ್ಸಿಗೆ ಕಾಯುತ್ತಿದ್ದದ್ದು ಅದೇ ಮರದಡಿಯೇ ಆಗಿತ್ತು. ಆ ದಿನಗಳಲ್ಲಿ ಸಮಯಕ್ಕೆ ಸರಿಯಾಗಿ ಬಾರದ ಬಸ್ಸುಗಳು, ಸುಡುವ ಬಿಸಿಲು ಮತ್ತು ಹಸಿದ ಹೊಟ್ಟೆಯ ಖಾಲಿ ಕಿಸೆಯ ವಿದ್ಯಾರ್ಥಿಗಳು. ಅಂದಿನ ಗ್ರಾಮೀಣ

